

ಅರುಣ ಪಿ. ಭಟ್ಟ


## ವಾರಭವಿಷ್ಯ 21.04.2022ರಿಂದ 27.04.2022ರವರೆಗೆ




ನೀವು ಕೈಗೊಳ್ಳುವ ಕೆಲಸದಿಂದ ವಿಶ್ವಾಸಾರ್ಹತೆ ಹಾಗೂ ಪ್ರತಿಭೆ ಹೆಚ್ಚಾಗುತ್ತದೆ. ಆದರೆ ಕೆಲವು ವ್ಯಕ್ತಿಗಳು ನಿಮ್ಮನ್ನು ಅವಮಾನಕ್ಕೆ ಗುರಿ ಮಾಡಲಿದ್ದಾರೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆರೋಗ್ಯ ಉತ್ತಮವಾಗಿದ್ದು, ಸಂತೋಷವಾಗಿ ಸಮಯ ಕಳೆಯಲಿದ್ದೀರಿ. ನಿಮ್ಮ ಕೆಲಸದ ಜತೆಜತೆಗೆ ಆಹಾರ ಪಥ್ಯದ ಬಗ್ಗೆಯೂ ಕಾಳಜಿ ತೆಗೆದುಕೊಳ್ಳುತ್ತೀರಿ. ಶುಭದಿನ 21. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ನಿಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವವರ ಸಂಖ್ಯೆ ಹೆಚ್ಚಾಗುತ್ತದೆ. ಕೆಲಸ ಕಾರ್ಯಗಳಲ್ಲಿ ತೊಂದರೆ ಎದುರಾಗುತ್ತದೆ. ತಾಂತ್ರಿಕ ಸಲಕರಣೆ, ಕೆಲಸಗಾರರು ಸಮಯಕ್ಕೆ ಸಿಗದಿರುವುದು ಇಂಥ ಕಾರಣಗಳಿಗೆ ತಡ ತೊಂದರೆ ಆಗುತ್ತದೆ. ಕೋರ್ಟ್ ಕೇಸುಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತೀರಿ. ವಿರೋಧಿ ಪಾಳಯದ ಪಿತೂರಿಯಿಂದ ಹಿನ್ನಡೆ ಅನುಭವಿಸಬೇಕಾಗುತ್ತದೆ. ಶುಭದಿನ 24. ಕಾಲಭೈರವನ ಸೇವೆ ಮಾಡಿರಿ.





ವಾರದ ಆರಂಭದಿಂದಲೇ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಸಂಬಂಧಿಕರ ಜತೆಗೆ ಉತ್ತಮ ಸಮಯ ಕಳೆಯುವ ಸಾಧ್ಯತೆ ಇದೆ. ಯಾವುದೇ ವ್ಯವಹಾರದಲ್ಲಿಯಾದರೂ ಬಹಳ ಎಚ್ಚರಿಕೆಯಿಂದ ವ್ಯವಹರಿಸಿ. ಈ ವಾರ ಸ್ವಲ್ಪ ಹೆಚ್ಚೇ ಹಣ ಖರ್ಚು ಮಾಡಬೇಕಾಗುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ನಿಮಗೆ ಅನುಕೂಲಕರ ಸನ್ನಿವೇಶ ಇರುತ್ತದೆ. ಶುಭದಿನ 22. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.





ವ್ಯಾಪಾರ ಕ್ಷೇತ್ರದಲ್ಲಿ ಇರುವವರಿಗೆ ಆದಾಯ ಉತ್ತಮವಾಗಿರುತ್ತದೆ. ಮದುವೆ ವಿಚಾರವಾಗಿ ಸಂಬಂಧಿಕರ ಜತೆಗೆ ಮಾತುಕತೆ ನಡೆಸಲಿದ್ದೀರಿ. ಈ ವಾರ ಹಲವು ತುರ್ತು ಕೆಲಸಗಳನ್ನು ಪೂರ್ಣಗೊಳಿಸುವಲ್ಲಿ ನಿಮ್ಮ ಗಮನ ಕೇಂದ್ರೀಕೃತವಾಗಿರುತ್ತದೆ. ಇದಕ್ಕಾಗಿ ಕೆಲ ಸಂಸ್ಥೆ– ವ್ಯಕ್ತಿಗಳ ಸಹಾಯ ಪಡೆಯುವ ಸಾಧ್ಯತೆ ಇದೆ. ಕೆಲವು ಆರೋಗ್ಯ ಸಮಸ್ಯೆಗಳು ನಿಮ್ಮನ್ನು ಕಾಡಬಹುದು. ಶುಭದಿನ 21. ಶಿವಕವಚ ಪಠಣ ಮಾಡಿರಿ.




ವಾರದ ಶುರುವಿನಿಂದಲೇ ಕೆಲಸಕ್ಕೆ ವೇಗ ನೀಡಲು ಬಹಳ ಪ್ರಯತ್ನ ಮಾಡುತ್ತೀರಿ. ನೀವು ಹಾಕಿದ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯಲಿದ್ದೀರಿ. ಇತರರ ಸಮಸ್ಯೆಗಳನ್ನು ಬಗೆಹರಿಸಲು ಹೊಸ ದಾರಿಗಳನ್ನು ಸೂಚಿಸುತ್ತೀರಿ. ಹಲವರ ಜತೆಗೆ ಏಕ ಕಾಲಕ್ಕೆ ಸಂಪರ್ಕ ಸಾಧಿಸುತ್ತೀರಿ. ನೀವು ಕೆಲಸ ಮಾಡುವ ರೀತಿಗೆ ಮೇಲಧಿಕಾರಿಗಳ ಜವಾಬ್ದಾರಿ ಎಚ್ಚರಗೊಳ್ಳುತ್ತದೆ. ಶುಭದಿನ 24. ಲಿಂಗಾಷ್ಟಕ ಪಠಣ ಮಾಡಿರಿ.





ನಿಮ್ಮ ವಿವೇಚನೆಯನ್ನು ಸಮರ್ಥವಾಗಿ ಬಳಸುವ ಮೂಲಕ ವ್ಯಾಪಾರವನ್ನು ಇನ್ನಷ್ಟು ಉತ್ತಮವಾಗಿ ಮಾಡುತ್ತೀರಿ. ಇನ್ನು ಈ ಅವಧಿಯಲ್ಲಿ ಕುಟುಂಬ ಸದಸ್ಯರ ಬಗ್ಗೆ ಹೆಚ್ಚು ಗಮನ ನೀಡುತ್ತೀರಿ. ಉದ್ಯೋಗಸ್ಥರಿಗೆ ಉದ್ಯೋಗ ಸ್ಥಳದಲ್ಲಿ ಸಹೋದ್ಯೋಗಿಗಳ ಜತೆಗೆ ಉದ್ವಿಗ್ನವಾದ ಸನ್ನಿವೇಶ ಎದುರಾಗುತ್ತದೆ. ಈ ಅವಧಿಯಲ್ಲಿ ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ಶುಭದಿನ 21. ಗಣಪತಿಗೆ ದೂರ್ವಾರ್ಚನೆ ಮಾಡಿರಿ.





ಈ ವಾರ ಕೌಟುಂಬಿಕ ಹಾಗೂ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ಎಚ್ಚರಿಕೆ ವಹಿಸಿ. ಸಣ್ಣ ವಿಚಾರ ಕೂಡ ದೊಡ್ಡ ಬಿಕ್ಕಟ್ಟಾಗಿ ಎದ್ದು ನಿಲ್ಲುವ ಸಾಧ್ಯತೆ ಇದೆ. ಕೌಟುಂಬಿಕ ವಿಚಾರದಲ್ಲಿ ಕ್ರಮೇಣವಾಗಿ ಪ್ರಗತಿ ಕಾಣುತ್ತದೆ. ಈಗ ಮಾಡುತ್ತಿರುವ ವ್ಯಾಪಾರ ವ್ಯವಹಾರ ಮತ್ತಷ್ಟು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಅವಕಾಶ ದೊರೆಯುತ್ತದೆ. ಶುಭದಿನ 23. ಸೌಂದರ್ಯ ಲಹರಿ ಪಠಿಸಿರಿ.





ವಾರದ ಮೊದಲ ಭಾಗದಿಂದಲೇ ಆರೋಗ್ಯವಾಗಿರುತ್ತೀರಿ. ರಾಜಕಾರಣಿಗಳಿಗೆ ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕಾಗುತ್ತದೆ. ವಾರದ ದ್ವಿತೀಯಾರ್ಧದಲ್ಲಿ ಖರೀದಿ ಮಾಡಲು ಭೂಮಿಯೊಂದರ ಪರಿಶೀಲನೆ ನಡೆಸುವ ಸಾಧ್ಯತೆ ಇದೆ. ಆದರೆ ಉದ್ಯೋಗ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಾರದ ಅಂತ್ಯ ಭಾಗದಲ್ಲಿ ವರ್ಗಾವಣೆ ಆಗುವ ಸಾಧ್ಯತೆ ಇದೆ. ಶುಭದಿನ 22. ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.





ವಾರದ ಶುರುವಿನಿಂದಲೇ ವ್ಯಾಪಾರಸ್ಥರು ಉದ್ಯೋಗಸ್ಥರು ತಮ್ಮ ವ್ಯಾಪಾರ ಉದ್ಯಮದ ಪ್ರಗತಿಯ ಪರಿಶೀಲನೆ ಮಾಡುವುದರಲ್ಲಿ ಸಕ್ರಿಯರಾಗುತ್ತೀರಿ. ನಿಮ್ಮ ಕಾರ್ಯಗಳನ್ನು ಈ ಹಿಂದೆಂದಿಗಿಂತಲೂ ವೇಗವಾಗಿ ಮಾಡಲಿದ್ದೀರಿ. ಈಗಿನ ಪರಿಸ್ಥಿತಿಯಲ್ಲಿ ನಿಮ್ಮ ಕೆಲಸ ಕಾರ್ಯಗಳನ್ನು ಪೂರ್ಣ ಮಾಡಲು ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ಶುಭದಿನ 25. ವಿಷ್ಣು ಸಹಸ್ರನಾಮ ಓದಿರಿ.




ಈ ವಾರ ಬಹಳ ಸಂತೋಷವಾಗಿ ಇರುತ್ತೀರಿ. ಆದಾಯಕ್ಕೆ ಸಂಬಂಧಿಸಿದ ಮೂಲಗಳಿಂದ ಉತ್ತಮ ಲಾಭ ಪಡೆಯುವ ಅವಕಾಶ ಇದೆ. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಯಶಸ್ಸು ಪಡೆಯುವ ಅವಕಾಶಗಳು ದೊರೆಯಲಿವೆ. ನಿಮ್ಮ ಮಕ್ಕಳ ಮದುವೆಯ ವಿಚಾರವನ್ನು ಅಂತಿಮಗೊಳಿಸುವ ಅವಕಾಶ ಇದೆ. ಸ್ಪರ್ಧಾಳುಗಳು  ಅತ್ಯುತ್ತಮ ಸಾಧನೆ ಮಾಡಲಿದ್ದೀರಿ. ಶುಭದಿನ 26. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ವಾರದ ಶುರುವಿನಿಂದಲೇ ಉದ್ಯೋಗ ಕ್ಷೇತ್ರದಲ್ಲಿ ಅದ್ಭುತವಾದ ಸಾಧನೆ ಮಾಡುವ ಅವಕಾಶಗಳಿವೆ. ವ್ಯಾಪಾರಸ್ಥರು ಸ್ಥಳೀಯವಾಗಿ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಳ್ಳುತ್ತೀರಿ. ವಾರದ ಆರಂಭದಲ್ಲಿ ಆರೋಗ್ಯ ಉತ್ತಮವಾಗಿ ಇರುತ್ತದೆ. ಸಾಮಾಜಿಕವಾಗಿ ಗೌರವ ಮನ್ನಣೆಗಳನ್ನು ಪಡೆಯಲಿದ್ದೀರಿ. ಮಕ್ಕಳ ಪ್ರಗತಿಯಿಂದ ಸಮಾಧಾನ ದೊರೆಯಲಿದೆ. ಶುಭದಿನ 25. ಸುಬ್ರಮಣ್ಯ ಜಪ ಮಾಡಿರಿ.




ಸಣ್ಣ ಪ್ರವಾಸ ಮಾಡಬೇಕಾಗಿ ಬರುತ್ತದೆ. ಸಂಸ್ಥೆಯೊಂದರ ಜತೆ ಮಹತ್ತರವಾದ ಒಪ್ಪಂದವೊಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ. ಮನೆ ಹಾಗೂ ಕುಟುಂಬದ ಬಗ್ಗೆ ಹೆಚ್ಚು ಯೋಚನೆ ಮಾಡಲಿದ್ದೀರಿ. ಶ್ವಾಸಕೋಶ ಸಮಸ್ಯೆ ಎದುರಾಗಬಹುದು. ವಾರದ ಮಧ್ಯ ಭಾಗದಿಂದ ಹಲವು ಒಳ್ಳೆ ಅವಕಾಶಗಳು ನಿಮ್ಮ ಪಾಲಿಗೆ ದೊರೆಯಲಿವೆ. ಆರೋಗ್ಯ ಉತ್ತಮವಾಗಿ ಇರುತ್ತದೆ. ಶುಭದಿನ 22. ಶ್ರೀ ದುರ್ಗಾ ಆರಾಧನೆ ಮಾಡಿರಿ.